**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

**ಸಿ.ಸಿ.ನಂ.4187/2021**

Cw -1

Pw-1

| | |
|---|---|
| ಸಾಕ್ಷಿದಾರನ ಹೆಸರು | ನಂದೀಶ |
| ತಂದೆ ಹೆಸರು | ಲೇಟ್ ಶಿವರಾಮಯ್ಯ |
| ವಯಸ್ಸು | 23 ವರ್ಷ |
| ಉದ್ಯೋಗ | ವಿದ್ಯಾರ್ಥಿ |
| ವಾಸ | ಬ್ಯಾಡರಹಳ್ಳಿ |

**<u>ಸಾಕ್ಷಿಗೆ ದಿಃ 14.10.2024 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ-2 ನನ್ನ ತಾಯಿಯಾಗಬೇಕು. ಆರೋಪಿ ನನಗೆ ಗೊತ್ತು. ದಿನಾಂಕಃ 17.02.2021 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ನಮ್ಮ ಜಮೀನು ಸ.ನಂ. 29/8 ರಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ಅಲ್ಲಿಗೆ ಬಂದು ಏಕಾಏಕಿ ನಮ್ಮ ಜಮೀನುನಲ್ಲಿರುವ ಹೆಬ್ಬೇವಿನ ಮರವನ್ನು ಕಟಾವು ಮಾಡುತ್ತಿದ್ದರು. ಅದನ್ನು ಪ್ರಶ್ನೆ ಮಾಡಿದ್ದಕ್ಕೆ ನನ್ನ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ನನ್ನ ತಾಯಿಗೆ ದಡಿಯಿಂದ ಕೈಕಾಲಿಗೆ, ಬೆನ್ನಿಗೆ , ಮಂಡಿಗೆ ಹೊಡೆದಿರುತ್ತಾರೆ. ನಾನು ಕೇಳಲು ಹೋದಾಗ ನನಗೆ ಎದೆಗೆ ಮತ್ತು ಬೆನ್ನಿಗೆ ಕೈಯಿಂದ ಗುದ್ದಿರುತ್ತಾರೆ. ಚಾಸಾ-3 ಮತ್ತು 4 ರವರು ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆ. ನಂತರ ಅಂಬುಲೆನ್ಸ ನಲ್ಲಿ ಕುಣಿಗಲ್ ಸರಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇವೆ. ನಂತರ ನನ್ನ ತಾಯಿ ಹೆಚ್ಚಿನ ಚಿಕಿತ್ಸೆಗೆ ಆದಿಚುಂಚನಗಿರಿ ಆಸ್ಪತ್ರೆಗೆ ಸೇರಿಸಿರುತ್ತೇವೆ. ಆದ ಕಾರಣ ದಿನಾಂಕಃ 18.02.2021 ರಂದು ದೂರನ್ನು ತಡವಾಗಿ ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ತಾಯಿಗೆ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ ಅದು ಈ ದಿನ ನ್ಯಾಯಾಲಯದಲ್ಲಿದ್ದು

ಸಾಕ್ಷಿ ಗುರುತಿಸಿದ ಕಾರಣ ಮು.ಮಾಲು -1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿ ದೊಣ್ಣೆಯಿಂದ ನನ್ನ ತಾಯಿ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆಂದರೆ ಸರಿ. ನನಗೆ ಆರೋಪಿ ಬಲಗೈ ಮುಷ್ಟಿಯಿಂದ ಗುದ್ದಿ ಮೈಕೈ ನೋವಾಗುವಂತೆ ಮಾಡಿರುತ್ತಾರೆಂದರೆ ಸರಿ. ನನ್ನ ತಾಯಿ ನನ್ನನ್ನು ಬಿಡಿಸಲು ಬಂದಾಗ ಅವರ ಜುಟ್ಟನ್ನು ಹಿಡಿದು ಎಳೆದಾಡಿ ಸೀರೆಯನ್ನು ಸಹ ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆಂದರೆ ಸರಿ. ನಂತರ ಅದೇ ದೊಣ್ಣೆಯಿಂದ ನನ್ನ ತಾಯಿಗೆ ಹೊಡೆದಿದ್ದು ನನ್ನ ತಾಯಿ ಜ್ಞಾನತಪ್ಪಿ ಬಿದ್ದಿರುತ್ತಾರೆಂದರೆ ಸರಿ. ಆರೋಪಿ ನಮ್ಮನ್ನು ಕುರಿತು ಈ ದಿನ ಉಳಿದುಕೊಂಡಿದ್ದೀರಾ ಇಂದಲ್ಲಾ ನಾಳೆ ನಿಮ್ಮನ್ನು ಕೊಲೆ ಮಾಡಿ ಊತು ಹಾಕುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ನನ್ನ ತಾಯಿ ಧರಿಸಿದ್ದ ಸೀರೆ ಈ ದಿನ ನ್ಯಾಯಾಲಯದಲ್ಲಿದ್ದು ಅದನ್ನೇ ಆರೋಪಿ ಹರಿದು ಹಾಕಿರುತ್ತಾರೆ ಎಂದರೆ ಸರಿ. ಸದರಿ ಸೀರೆಯನ್ನು ಸಾಕ್ಷಿ ಗುರುತಿಸಿದ್ದರಿಂದ ಮು.ಮಾಲು -2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದಃ</u>**

ಆರೋಪಿಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.